# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.

**ಸಿ. ಸಿ. ನಂ.:357/2019**

| | | |
|---|---|---|
| ಹೆಸರು | ಮುರಳಿಧರ್ | **ದಿಃ 31-08-2023** |
| ತಂದೆ ಹೆಸರು | ಭದ್ರೇಗೌಡ | |
| ವಯಸ್ಸು | 43 ವರ್ಷ | **ಪಿಡಬ್ಲ್ಯೂಃ 1** |
| ಉದ್ಯೋಗ | ಹೋಟೆಲ್ ಕೆಲಸ | **ಸಿಡಬ್ಲ್ಯೂಃ 1** |
| ವಾಸ | ಹಳೇಬೀಡು ಗ್ರಾಮ | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುವುದಿಲ್ಲ. ಚಾಸಾ-2 ರವರ ಪರಿಚಯ ಇರುವುದಿಲ್ಲ.

ಈಗ ತೋರಿಸಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ನಿಶಾನೆಗೊಳಪಡಿಸಲಾಯಿತು.

ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಮಾದರಿ ಸೀಲಿನ ನಕಲು ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ಬೇಲೂರಿನ ಅಬ್ಕಾರಿ ಕಛೇರಿ ಮುಂದೆ ಸುಮಾರು 6 ವರ್ಷಗಳ ಹಿಂದೆ ಮಾಡಿರುತ್ತೇನೆ

ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಈಗ ನ್ಯಾಯಾಲಯದ ಮುಂದಿರುವ 90 ಎಂ ಎಲ್ ನ 15 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ , 90 ಎಂ ಎಲ್ ನ 5 ಎಂಸಿ ರಮ್ ನ ಟೆಟ್ರಾ ಪ್ಯಾಕ್ , 180 ಎಂ ಎಲ್ ನ 5 8 ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಸಾಕ್ಷಿ ನೋಡಿ ಗುರ್ತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ16-03-2019 ರಂದು ಮದ್ಯಾಹ್ನ 1-30 ಗಂಟೆಯ ಸಮಯದಲ್ಲಿ ಹಳೇಬೀಡು ಮುಖ್ಯ ರಸ್ತೆಯಲ್ಲಿ ನಿಂತಿದ್ದ ನನ್ನನ್ನು ಮತ್ತು ಚಾಸಾ-2 ರವರನ್ನು ಅಬ್ಕಾರಿ ಉಪನಿರೀಕ್ಷಕರು ಕರೆದು ಕರೆದು ಬಂದ ಮಾಹಿತಿಯನ್ನು ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದಕ್ಕೆ ನಾವು ಒಪ್ಪಿ ಆರೋಪಿಗೆ ಸೇರಿದ ಮಲ್ನಾಡ್ ಹೋಟೆಲ್ ಗೆ ಹೋದೆವು ಎಂದರೆ ಸರಿಯಲ್ಲ. ಹೋಟೆಲ್ ಹತ್ತಿರ ಹೋದಾಗ ಸಮವಸ್ತ್ರದಲ್ಲಿದ್ದ ಅಧಿಕಾರಿಗಳನ್ನು ನೋಡಿ ಆರೋಪಿ ಹೋಟೆಲ್ ನ ಹಿಂಭಾಗದಿಂದ ಓಡಿ ಹೋದನೆಂದರೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಶೋಧನ ಸಮುಚಿತ ಆಧಾರ ತಯಾರಿಸಿ ಹೋಟೆಲ್ ನ್ನು ಶೋಧನೆ ಮಾಡಿದಾಗ ಹೋಟೆಲ್ ಗೆ ಹೊಂದಿಕೊಂಡಿರುವ ಅಡುಗೆ ಮನೆಯ ಒಂದು ಮೂಲೆಯಲ್ಲಿ ಪಾಸ್ಟಿಕ್ ಚೀಲ ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಲಾಗಿ 90 ಎಂ ಎಲ್ ನ 210 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ , 90 ಎಂ ಎಲ್ ನ 28 ಎಂಸಿ ರಮ್ ನ ಟೆಟ್ರಾ ಪ್ಯಾಕ್ , 180 ಎಂ ಎಲ್ ನ 12 8 ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ಅವುಗಳಲ್ಲಿ ಕ್ರಮವಾಗಿ ರಾಸಾಯಿನಿಕ ಪರೀಕ್ಷೆಗಾಗಿ 90 ಎಂ ಎಲ್ ನ 15 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ , 90 ಎಂ ಎಲ್ ನ 5 ಎಂಸಿ ರಮ್ ನ ಟೆಟ್ರಾ ಪ್ಯಾಕ್ , 180 ಎಂ ಎಲ್ ನ 5 8 ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ತೆಗೆದು ಅವುಗಳನ್ನು ಬಿಳಿ ಚೀಲದಲ್ಲಿ ಸುತ್ತಿ ಮತ್ತು ದಾರದಲ್ಲಿ ಸುತ್ತಿ ಅವುಗಳಿಗೆ ಇಲಾಖಾ ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಓಡಿ ಹೋದ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಮಧು ಬಿನ್ ಹೂವೇಗೌಡ , ಹಳೇಬೀಡು ಗ್ರಾಮ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ದೊರೆತ ಸ್ವತ್ತುಗಳನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಮದ್ಯಾಹ್ನ 1-30 ರಿಂದ 2-30 ಗಂಟೆಯವರೆಗೆ ನಿಪಿ-1 ರಂತೆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕ್ಕೆ ನಾನು ಸ್ಥಳದಲ್ಲಿ ಇದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ-1 ಮತ್ತು 2 ರಲ್ಲಿನ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಪಿ ರವರಿಂದಃ**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿಯತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.

Case called again.

Accused No.1 present.

CW-1 and 2 are present. They are examined as PW-1 and 2 respectively. Ex.P-1 to P-3, P-1(a), P-2(a) are marked.

The said material witnesses found to be turned hostile.

The Learned APP seeks to issue Summons to other witnesses. Since the material witnesses turned hostile, no purpose will be served if the summons is issued to other witnesses.

Hence, prayer of Learned APP is rejected.

The statement of accused U.s 313 of CrPC is also hereby dispensed.

A memo is filed by the Counsel for the accused No.1 to 6 stating that the earlier surety bond executed by them may be considered as bond executed towards compliance of provisions of sec. 437-A of CrPC.

Heard arguments.

For Judgment by: 27-12-2021

**Civil Judge and JMFC, Belur.**